<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	130
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಪಿ.ಆರ್ ರಮೇಶ್, (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	13.12.2021
ಉತ್ತರಿಸುವ ಸಚಿವರು	:	ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಪೆಟ್ರೋಲ್/ಡಿಸೇಲ್ ಸಾರ್ವಜನಿಕ ವಿತರಣಾ ಪಂಪ್‌ಗಳ ಸಂಖ್ಯೆ ಎಷ್ಟು;(ಜಿಲ್ಲಾವಾರು ವಿವರ ನೀಡುವುದು)	ರಾಜ್ಯಾದ್ಯಂತ ಒಟ್ಟು 5000 ಪೆಟ್ರೋಲ್/ಡಿಸೇಲ್ ಪಂಪ್ ಗಳಿವೆ. ಜಿಲ್ಲಾವಾರು ಮಾಹಿತಿಯನ್ನು <u>ಅನುಬಂಧದಲ್ಲಿ</u> ಒದಗಿಸಲಾಗಿದೆ.
(ಆ)	ಇತ್ತೀಚಿಗೆ ರಾಜ್ಯದಲ್ಲಿರುವ ಹಲವು ಪೆಟ್ರೋಲ್/ಡಿಸೇಲ್ ಸಾರ್ವಜನಿಕ ವಿತರಣಾ ಪಂಪ್ ಗಳಲ್ಲಿ ಪೆಟ್ರೋಲ್/ಡಿಸೇಲ್ ವಿತರಣೆಯಲ್ಲಿ ಅಳತೆ ವ್ಯತ್ಯಾಸದ ಕುರಿತು ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಲು ಸರ್ಕಾರದ ಬಳಿ ಯಾವುದಾದರೂ ಪ್ರಾಧಿಕಾರ/ವ್ಯವಸ್ಥೆ ಜಾರಿಯಲ್ಲಿದೆಯೇ; ಇದ್ದಲ್ಲಿ, ಸದರಿ ದೂರು ಪ್ರಾಧಿಕಾರದ/ವ್ಯವಸ್ಥೆಯ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಕ್ರಮಗಳೇನು;(ವಿವರ ನೀಡುವುದು)	ಪೆಟ್ರೋಲ್/ಡಿಸೇಲ್ ವಿತರಣೆಯಲ್ಲಿ ಅಳತೆ ವ್ಯತ್ಯಾಸದ ಕುರಿತು ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಕಾನೂನು ಮಾಪನಶಾಸ್ತ್ರ ಇಲಾಖೆಗೆ ಸಲ್ಲಿಸಬಹುದಾಗಿರುತ್ತದೆ. ಕಾನೂನು ಮಾಪನಶಾಸ್ತ್ರ ಇಲಾಖಾ ವತಿಯಿಂದ ರಾಷ್ಟ್ರೀಯ ಮತ್ತು ವಿಶ್ವ ಗ್ರಾಹಕರ ದಿನಾಚರಣೆಯ ಸಂದರ್ಭದಲ್ಲಿ ರಾಜ್ಯಾದ್ಯಂತ ಜಿಲ್ಲಾವಾರು ಕಾರ್ಯಕ್ರಮಗಳನ್ನು ಏರ್ಪಡಿಸಿ ವಸ್ತು ಪ್ರದರ್ಶನದ ಮೂಲಕ ಸಾರ್ವಜನಿಕರಿಗೆ ಜಾಗೃತಿ ಅರಿವು ಮೂಡಿಸಲಾಗುತ್ತಿದೆ. ಹಾಗೂ ಕರಪತ್ರ ಮತ್ತು ಭಿತ್ತಿ ಚಿತ್ರಗಳನ್ನು ಸಾರ್ವಜನಿಕರಿಗೆ ವಿತರಿಸುವ ಮೂಲಕ ಗ್ರಾಹಕರಲ್ಲಿ ಅರಿವು ಮೂಡಿಸಲಾಗುತ್ತಿದೆ.
(ಇ)	ಇತ್ತೀಚಿಗೆ ರಾಜ್ಯದಲ್ಲಿರುವ ಹಲವು ಪೆಟ್ರೋಲ್/ಡೀಸೆಲ್ ಸಾರ್ವಜನಿಕ ವಿತರಣಾ ಪಂಪ್ ಗಳಲ್ಲಿ ಪೆಟ್ರೋಲ್/ಡಿಸೇಲ್ ವಿತರಣೆಯಲ್ಲಿ ಅಳತೆ ವ್ಯತ್ಯಾಸದ ಕುರಿತು ಸರ್ಕಾರದ ಬಳಿಯಾವುದಾದರೂ ದೂರುಗಳು ಬಂದಿವೆಯೇ?(ಬಂದಿದ್ದಲ್ಲಿ ಜಿಲ್ಲಾವಾರು ವಿವರ ನೀಡುವುದು)	ಪೆಟ್ರೋಲ್/ಡಿಸೇಲ್ ಸಾರ್ವಜನಿಕ ವಿತರಣ ಪಂಪ್ ಗಳಲ್ಲಿ ಪೆಟ್ರೋಲ್/ಡಿಸೇಲ್ ವಿತರಣೆಯಲ್ಲಿ ಅಳತೆ ವ್ಯತ್ಯಾಸದ ಕುರಿತು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ಆದಾಗ್ಯೂ ಕೆಲವು ಟಿ.ವಿ ಮಾಧ್ಯಮಗಳಲ್ಲಿ ಪೆಟ್ರೋಲ್/ಡಿಸೇಲ್ ವಿತರಣೆಯಲ್ಲಿ ಅಳತೆ ವ್ಯತ್ಯಾಸದ ಕುರಿತು ಸುದ್ಧಿ ಪ್ರಸಾರವಾದ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಇಲಾಖೆಯ ಕ್ಷೇತ್ರಾಧಿಕಾರಿಗಳು ಜಂಟಿ ತಪಾಸಣೆ ನಡೆಸುವ ಮೂಲಕ 1390 ತಪಾಸಣೆಗಳನ್ನು ನಡೆಸಿ, 276 ಮೊಕದ್ದಮೆಗಳನ್ನು ದಾಖಲಿಸಿ, ರೂ.3,27,000/-ಗಳ

		ಅಭಿಸಂಧಾನ ದಂಡವನ್ನು ಸಂಗ್ರಹ ಮಾಡಲಾಗಿರುತ್ತದೆ. ಅಲ್ಲದೇ ಇಲಾಖೆಯ ಕ್ಷೇತ್ರಾಧಿಕಾರಿಗಳು ಆಗಿಂದಾಗ್ಗೆ ಅನಿರೀಕ್ಷಿತ ತಪಾಸಣೆ ಕೈಗೊಂಡು, ತಪ್ಪು ಕಂಡುಬಂದಲ್ಲಿ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ: ಆನಾಸ 108 ಕಾಮಾಸೇ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು

ಅನುಬಂಧ

ಜಿಲ್ಲಾವಾರು ಪೆಟ್ರೋಲ್/ಡೀಸೆಲ್ ಪಂಪ್‌ಗಳ ಮಾಹಿತಿ

ಕ್ರಸಂ	ಜಿಲ್ಲೆಯ ಹೆಸರು	ಪೆಟ್ರೋಲ್/ಡೀಸೆಲ್ ಬಂಕ್ ಸಂಖ್ಯೆ
1	ಬೆಂಗಳೂರು ಜಿಲ್ಲೆ	631
2	ಬೆಂಗಳೂರು ಗ್ರಾಮಾಂತರ	162
3	ರಾಮನಗರ	91
4	ಶಿವಮೊಗ್ಗ	135
5	ದಾವಣಗೆರೆ	150
6	ಚಿಕ್ಕಬಳ್ಳಾಪುರ	95
7	ಕೋಲಾರ	125
8	ತುಮಕೂರು	235
9	ಚಿತ್ರದುರ್ಗ	132
10	ಮೈಸೂರು	166
11	ಮಂಡ್ಯ	157
12	ಹಾಸನ	213
13	ಚಿಕ್ಕಮಗಳೂರು	105
14	ಮಂಗಳೂರು	152
15	ಉಡುಪಿ	202
16	ಮಡಿಕೇರಿ	59
17	ಚಾಮರಾಜನಗರ	134
18	ಬೆಳಗಾವಿ	248
19	ವಿಜಯಪುರ	195
20	ಬಾಗಲಕೋಟೆ	185
21	ಗದಗ	108
22	ಹಾವೇರಿ	118
23	ಹುಬ್ಬಳ್ಳಿ	258
24	ಕಾರವಾರ	95
25	ಕಲಬುರಗಿ	170
26	ಯಾದಗಿರಿ	55
27	ರಾಯಚೂರು	141
28	ಕೊಪ್ಪಳ	130
29	ಬಳ್ಳಾರಿ	241
30	ಬೀದರ್	112
	ರಾಜ್ಯದ ಒಟ್ಟು	5000